ದೃಢೀಕರಿಸಿಕೊಂಡ ನಂತರ ಜಾತಿ ದೃಢೀಕರಣ ಪತ್ರ ನೀಡುವುದು ಸಾಧ್ಯವಾಗುತ್ತದೆ. ಕಾರಣ ಈ ಜನಾಂಗವು ಪರಿಶಿಷ್ಟ ವರ್ಗಗಳ ಜನಾಂಗಕ್ಕೆ ಸಿಗುವಂತಹ ಸೌಲಭ್ಯವನ್ನು ಪಡೆಯಬೇಕಾದಲ್ಲಿ ಸದರಿಯವರು ಮೂಲತಹ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರೆಂಬ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ಜಾತಿ ದೃಢೀಕರಣ ಪತ್ರವನ್ನು ಪಡೆಯಬೇಕಾಗುತ್ತದೆ. ಇಲ್ಲದಿದ್ದಲ್ಲಿ, ಈ ಜನಾಂಗವು ಮೂಲತಹ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರೆಂಬ ಬಗ್ಗೆ ಸಂಬಂಧಿಸಿದ ಸಹಶೀಲ್ದಾರರಿಂದ ವರದಿ ನೀಡಿದಲ್ಲಿ, ಸದರಿ ಜನಾಂಗವು ಹಾಲಿ ವಾಸಿಸುತ್ತಿರುವ ಸ್ಥಳಗಳಿಗೆ ಸಂಬಂಧಿಸಿದ ತಹಶೀಲ್ದಾರರು ಜಾತಿ ದೃಢೀಕರಣ ಪತ್ರವನ್ನು ನೀಡಲು ಸಾಧ್ಯವಾಗುವುದು.

ಸಮುದ್ರ ಕೊರೆತ ಸಂಭವಿಸಿದಾಗ ತೆಗೆದುಕೊಳ್ಳತಕ್ಕ ತುರ್ತು ಕಾಮಗಾರಿಗಳಿಗೆ ಹಣ ಬಿಡುಗಡೆಯಾಗದಿರುವ ಬಗ್ಗೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಣ್ಣ ನೀರಾವರಿ ಸಚಿವರಲ್ಲಿ, 1993ನೇ ಸಾಲಿನಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 12 ತುರ್ತು ಕಾಮಗಾರಿಗಳಿಗೆ 11.86 ಲಕ್ಷರೂ. ವೆಚ್ಚದ ಅಂದಾಜು ಪಟ್ಟಿಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಿಲ್ಲ. ಈ ಕಾಮಗಾರಿಗಳನ್ನು ತುರ್ತು ಕಾಮಗಾರಿಯೆಂದು ಗುತ್ತಿಗೆದಾರರನ್ನು ಒಲೈಸಿ ಕಾಮಗಾರಿ ಪೂರ್ತಿಗೊಳಿಸಲಾಗಿದೆ. ಸರಕಾರದ ಗಮನಕ್ಕೆ ಬಂದರೂ ಈವರೆಗೂ ಹಣ ಬಿಡುಗಡೆಯಾಗಿಲ್ಲ. 1994ನೇ ಸಾಲಿನಲ್ಲಿ ಮತ್ತೆ 33 ತುರ್ತು ಕಾಮಗಾರಿಗೆ 51.389 ಲಕ್ಷ ಆಡಳಿತ ಅನುಮೋದನೆ ನೀಡಿಯೂ ಹಣ ಬಿಡುಗಡೆಯಾಗಿಲ್ಲ. 1993-94 ಹಾಗೂ ಬಿಡುಗಡೆ ಆಗದೆ 1995ನೇ ಸಾಲಿನಲ್ಲಿ ಸಮುದ್ರ ಹಾಗೂ ನದೀ ಕೊರೆತಗಳ ಮತ್ತೊಮ್ಮೆ 26 ಕಾಮಗಾರಿಗಳಿಗೆ 119.34 ಲಕ್ಷ ರೂ. ಆಡಳಿತ ಅನುಮೋದನೆ ಹಾಗೂ ಹಣ ಬಿಡುಗಡೆಗೆ ಕೋರಿದ್ದರೂ ಸುಮಾರು 50 ಲಕ್ಷ ಕಾಮಗಾರಿ ಸಂಪೂರ್ಣಗೊಂಡಿದ್ದರೂ ಹಣ ಬಿಡುಗಡೆಗೆ ಸರಕಾರ ಈವರೆಗೆ ಕ್ರಮ ಕೈಗೊಳ್ಳದೆ ಇನ್ನು ಮುಂದೆ ದಿಢೀರ್ ಆಗಿ ಸಮುದ್ರ ಕೊರೆತಗಳಾದಲ್ಲಿ ತುರ್ತು ಕಾಮಗಾರಿ ಕೆಲಸ ಮಾಡಲು ಯಾವುದೇ ಕ್ರಮ ಕೈಗೊಳ್ಳುವುದೆಂದು ಸಚಿವರು ವಿವರಿಸುವಿರಾ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993-94ನೇ ಮತ್ತು 94-95ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ತುರ್ತು ಸಮುದ್ರ ಕೊರೆತ ತಡೆ ಕಾಮಗಾರಿಗಳಿಗೆ ಒಟ್ಟು 55.454 ಲಕ್ಷ ರೂ.ಗಳ ಅನುದಾನವನ್ನು ಪ್ರಕೃತಿ ವಿಕೋಪ ಪರಿಹಾರನಿಧಿ ಅಡಿ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾಗಬೇಕಾಗಿರುತ್ತದೆ. ಈ ಪ್ರಸ್ತಾಪನೆಯ ಬಗ್ಗೆ ದಿನಾಂಕ: 21-4-95ರಂದು ನಡೆದ ರಾಜ್ಯಮಟ್ಟದ "ಪ್ರಕೃತಿ ವಿಕೋಪ ಪರಿಹಾರ ನಿಧಿಯ" ಆಡಳಿತ ಮತ್ತು ನಿರ್ವಹಣಾ ಸಮಿತಿಯ ಸಭೆಯು ನಿರ್ವಹಿಸಿ ಕಾಮಗಾರಿಗಳ ಉಪಯುಕ್ತತೆ ಹಾಗೂ ಗುಣಮಟ್ಟದ ಬಗ್ಗೆ ನೀರಾವರಿ ಇಲಾಖೆಯು ಪರಿಶೀಲಿಸಿ ನಂತರ ಬಾಕಿ ಬಿಲ್ಲುಗಳ ಪಾವತಿಯನ್ನು ಮಾಡುವ ಬಗ್ಗೆ ನಿರ್ಧರಿಸಿದ್ದರಿಂದ ಸದರಿ ಕಾಮಗಾರಿಗಳ ಬಗ್ಗೆ ಪರಿವೀಕ್ಷಿಸಿ ಅವುಗಳ ಗುಣಮಟ್ಟ ಮತ್ತು ಉಪಯುಕ್ತತೆ ಬಗ್ಗೆ ವರದಿ ಮಾಡುವಂತೆ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ. ಅವರಿಂದ ವರದಿ ಪಡೆದು ಕಂದಾಯ ಇಲಾಖೆಗೆ ಹಣ ಬಿಡುಗಡೆ ಮಾಡುವಂತೆ ಕೋರಲಾಗುವುದು.

1995ರ ಸಾಲಿನಲ್ಲಿ ಕೈಗೊಂಡ 26 ತುರ್ತು ಕಾಮಗಾರಿಗೆಳಿಗೆ 119.34 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಬೇಕಾಗಿದ್ದು ಇದರಲ್ಲಿ 5 ಲಕ್ಷ ರೂ.ಗಳು ಮಾತ್ರ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳ ಅಂದಾಜುಗಳಿಗೆ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ. ಈ ವೆಚ್ಚವನ್ನು ಕಂದಾಯ ಇಲಾಖೆಯು ಭರಿಸಬೇಕಾಗಿದೆ.

5.00 ಪಿ.ಎಂ.

ಶಂಕರ್ ನಾರಾಯಣ್ ಪೋಲೀಸ್ ಸ್ಟೇಟಿನ ಸಭೆ ಇನ್ಸಪೆಕ್ಟರ್ ಕಿರುಕುಳ ತಾಳಲಾರದೇ ಶ್ರೀಮಹಾಬಲಶೆಟ್ಟಿಯವರ ಆತ್ಮಹತ್ಯೆ

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ ಕ್ಷೇತ್ರ) : ಮಾನ್ಯ ಉಪಸಭಾಧ್ಯಕ್ಷರೆ, ಕಂದಾಪುರ ತಾಲ್ಲೂಕಿನ ಶಂಕರನಾರಾಯಣ ಪೋಲೀಸ್ ಠಾಣೆ ವ್ಯಾಪ್ತಿಯ ಹೊಸಂಗಡಿ ಗ್ರಾಮದ ಮಹಾಭಲ ಶೆಟ್ಟಿ (38 ವರ್ಷ) ಎಂಬುವರು ಭೂರಹಿತರಾಗಿದ್ದು, ಸರಕಾರಿ ಜಮೀನನ್ನು ಕಳೆದ 10 ವರ್ಷಗಳಿಂದ ಒತ್ತುವರಿ ಮಾಡಿ ಸಾಗುವಳಿ ಮಾಡಿಕೊಂಡಿರುತ್ತಾರೆ. ನೆರೆಮನೆಯ ಭೂಮಾಲೀಕ ಹಾಗೂ ಮಾಜಿ ಗೇಣಿದಾರ ಕೃಷ್ಣಪ್ಪ ಶೆಟ್ಟಿಯು, ಮಹಾಬಲ ಶೆಟ್ಟಿಯು ಒತ್ತುವರಿ ಮಾಡಿದ ಜಮೀನನ್ನು ಕಬಳಿಸುವ ಹಂಚಿಕೆಯಿಂದ, ಶಂಕರನಾರಾಯಣ ಠಾಣೆಯ ಸಬ್‌ಇನ್ಸ್‌ಪೆಕ್ಟರನ್ನು ಮನೆಗೆ ಕರೆಸಿ ಔತಣಕೂಡ ಏರ್ಪಡಿಸಿ ಮತ್ತು ಸಬ್‌ಇನ್ಸ್‌ಪೆಕ್ಟರ್ ಮನೆಗೆ ಕೆಲಸಕ್ಕೆ ತನ್ನ ನೆರೆಮನೆಯ ಶೀನ ಪೂಜಾರಿಯ ಮಗಳನ್ನು ಹಾಕಿಕೊಟ್ಟು, ಇಲ್ಲಸಲ್ಲದ ಸುಳ್ಳು ದೂರುಗಳನ್ನು ಸಹಾಬಲ ಶೆಟ್ಟಿಯ ಮೇಲೆ ಕೊಟ್ಟು, ಕಿರುಕುಳ ಕೊಡುತ್ತಾ ಇರುವುದು ಹಿಂದಿನ ದಾಖಲೆಗಳಿಂದ ತಿಳಿದುಬಂದಿರುತ್ತದೆ. ಬೇರೆ ಬೇರೆ ಒತ್ತಾಯ ಮತ್ತು ಆಮಿಷಗಳಿಂದ ಕೃಷ್ಣಪ್ಪ ಶೆಟ್ಟಿ ಮಾತಿನಿಂದ ಶಂಕರನಾರಾಯಣದ ಸಬ್‌ಇನ್ಸ್‌ಪೆಕ್ಟರ್ ಮಹಾಬಲ ಶೆಟ್ಟಿಗೆ ಕಿರುಕುಳ ಕೊಡುತ್ತಿದ್ದು, ಇದರಿಂದ ರೋಸಿಹೋದ ಮಹಾಬಲ ಶೆಟ್ಟಿ ತಾರೀಖು 23-2-1996 ರಾತ್ರಿ 10-30ಕ್ಕೆ ಆತ್ಮಹತ್ಯೆಗೆ ಪ್ರಯತ್ನಿಸಿದರು. ಜೀವನ್ಮರಣದ ಹೋರಾಟದಲ್ಲಿರುವ ಮಹಾಬಲಶೆಟ್ಟರನ್ನು ಸಿದ್ಧಾಪುರದ ಜಾನಕಿ ಆಸ್ಪತ್ರೆಗೆ ತಂದು ಅಲ್ಲಿಂದ ರಾತ್ರಿ 2-30ಕ್ಕೆ ಕುಂದಾಪುರ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈಗ ಮಹಾಬಲ ಶೆಟ್ಟರು ಸರಕಾರಿ ಆಸ್ಪತ್ರೆಯಲ್ಲಿ ಚೇತರಿಸುತ್ತಿದ್ದಾರೆ. ಹತೋಟಿಯಿಲ್ಲದ, ಹದ್ದುಮೀರಿದ, ದೂರುಕೊಟ್ಟವರ ಮನೆಯಲ್ಲಿ ಔತಣಕೂಟ ಏರ್ಪಡಿಸುವ, ಸದಾ ಪಾನಮತ್ತಹನಾಗಿರುವ ಸಬ್‌ಇನ್ಸ್‌ಪೆಕ್ಟರ್‌ರವರನ್ನು ಅಮಾನತ್ತಿನಲ್ಲಿಟ್ಟು ತನಿಖೆ ನಡೆಸಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಸಭಾಧ್ಯಕ್ಷರೆ, ಗೃಹ ಮಂತ್ರಿಗಳು ವಿಷಯದ ಬಗ್ಗೆ ಮಾಹಿತಿ ತರಿಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಇನ್ನು ಸ್ವಲ್ಪ ಹೊತ್ತಿಗೆ ವರದಿಯನ್ನು ತರಿಸಿ ಮುಂದಿಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಹೊಸಂಗಡಿ ಗ್ರಾಮದ ಕೃಷ್ಣಪ್ಪ ಶೆಟ್ಟಿಯ ಎರಡನೆಯ ಹೆಂಡತಿ ಗಿರಿಜಮ್ಮನ ಮೂರು ಮಕ್ಕಳಲ್ಲಿ ಎರಡನೆಯವಳಾದ ವಿಮಲಾಳ ಗಂಡನೇ ಮಹಾಬಲಶೆಟ್ಟಿ ಇವರು ಕೃಷ್ಣಶೆಟ್ಟಿಯ ಅಳಿಯಂದಿರಾದದ್ದು 14 ವರ್ಷಗಳ ಹಿಂದೆ.